
ಇಷ್ಟು ವರ್ಷ ನಾನು ಬರೀ ಓದಿದೆ. ಆದರೆ, ಇಂಡಿಯಾಕ್ಕೆ ಹೋಗಬೇಕು, ಕೆಲವು ವರ್ಷ ಅಲ್ಲಿ ಇರಬೇಕು, ಅಲ್ಲಿನ ಜನಜೀವನ ನೋಡಬೇಕು ಎಂದು ಆಸೆಯಿತ್ತು. ಅಲ್ಲಿ ಇರುವುದಕ್ಕೆ ಯಾವುದಾದರೊಂದು ಶಿಷ್ಯವೇತನ ಸಿಗಬೇಕಿತ್ತು. ಫಿಲಾಸಫಿಕಲ್ ಸ್ಟಡೀಸ್ ಮಾಡುವುದಾದರೆ, ವೇತನ ಕೊಡುವಂತಹ ಫೌಂಡೇಶನ್ಸ್ ಇಲ್ಲಿವೆ. ಆದರೆ, ಫಿಲಾಸಫಿಯಲ್ಲಿ ಡಾಕ್ಟರೇಟ್ ಮಾಡಬೇಕಾದರೆ ಯಾಕೆ ಇಂಡಿಯಾಕ್ಕೆ ಹೋಗಬೇಕು? ಅದಕ್ಕೆ ಬೇಕಾದ ಪುಸ್ತಕಗಳು ಇಲ್ಲೇ ಗ್ರಂಥಾಲಯದಲ್ಲಿವೆ. ಯಾವುದಾದರೊಂದು ಸಮಕಾಲೀನ ಸಾಮಾಜಿಕ ವಿಷಯದಲ್ಲಿ ಸಂಶೋಧನೆ ಮಾಡಿದರೆ ಮಾತ್ರ ಇಂಡಿಯಾಕ್ಕೆ ಹೋಗುವುದಕ್ಕೆ ಅವಕಾಶ ಸಿಗುತ್ತಿತ್ತು. ಕನ್ನಡದಲ್ಲಿ ಬರೀ ಪ್ರಾಚೀನ ಜೈನಸಾಹಿತ್ಯ ಮಾತ್ರವಲ್ಲ, ಬೇರೆ ಏನೇನೊ ಆಸಕ್ತಿಕರವಾದವು ಇವೆ. ಆದ್ದರಿಂದ ನಾನು ಆಧುನಿಕ ಕನ್ನಡ ಸಾಹಿತ್ಯದ ಮೇಲೆ ಒಂದು ಥಿಸಿಸ್ ಬರೆಯಬೇಕು ಎಂದು ಶಿಷ್ಯವೇತನ ತೆಗೆದುಕೊಂಡು ಇಂಡಿಯಾಕ್ಕೆ ಹೋದೆ. ಅನೇಕ ಮಂದಿ ಬುದ್ಧಿವಂತ, ಸೌಜನ್ಯ ಇರುವ, ತುಂಬಾ ಕುತೂಹಲಕಾರಿಯಾದ ಜನ ಸಿಕ್ಕರು. ತುಂಬಾ ಕಲಿಸಿದರು. ಮೈಸೂರಿನಲ್ಲಿದ್ದು ಡಾಕ್ಟೊರಲ್ ಥಿಸಿಸ್ ಬರೆದೆ. ನನ್ನ ಕೆಲಸದಿಂದ ತೃಪ್ತಿ ಆಯ್ತು.




◆ **ಅಧ್ಯಯನಕ್ಕೆ ಯಾವ್ಯಾವ ವಿದ್ವಾಂಸರು ನೆರವಾದರು?**

ಹಾ.ಮಾ. ನಾಯಕರ ಜೊತೆ ಸುಮಾರು ಸಲ ಚರ್ಚೆ ಮಾಡಿದೆ. ಮತ್ತೆಮತ್ತೆ ಅನಂತಮೂರ್ತಿಯವರ ಮನೆಗೆ ಹೋಗಿ ಚರ್ಚೆ ಮಾಡಿದೆ. ಜಿ.ಎಚ್. ನಾಯಕ ಮತ್ತು ಚದುರಂಗ ಅವರನ್ನು ಭೇಟಿಯಾದೆ. ಒಂದೇ ಒಂದು ಸಲ ಗೋಪಾಲಕೃಷ್ಣ ಅಡಿಗರನ್ನು ಭೇಟಿ ಮಾಡಿದೆ. ಶಾಂತಿನಾಥ ದೇಸಾಯಿ, ಬಸವರಾಜ ಕಟ್ಟೀಮನಿ, ಎಂ.ಎಂ ಕಲಬುರ್ಗಿಯವರ ಜೊತೆಗೆ ಪತ್ರ ವ್ಯವಹಾರ ಮಾಡಿದ್ದೆ.

◆ **ಸಂಶೋಧನೆಯ ವಿಷಯ ಯಾವುದು?**

ನಾನು ಕನ್ನಡ ಕಾದಂಬರಿ–ಸಣ್ಣಕಥೆಗಳಲ್ಲಿ ಕೆಲವು ಸಂಸ್ಕೃತಿ ವಿಶಿಷ್ಟ ಕಥಾವಸ್ತುಗಳನ್ನು ಗುರುತಿಸಿದೆ. ಅಲ್ಲಿ ಯಾವುದಾದರೂ ಒಂದು ಸಮಸ್ಯೆ ಅಥವಾ ಪ್ರಶ್ನೆ ಇದೆ. ಅದಕ್ಕೆ ಸಾಂಸ್ಕೃತಿಕ ಐತಿಹಾಸಿಕ ಕಾರಣಗಳು ಇವೆ. ಲೇಖಕರು ಆ ಸಮಸ್ಯೆಯನ್ನು ತೆಗೆದುಕೊಂಡು ವಿಶ್ಲೇಷಣೆ ಮಾಡುತ್ತಾರೆ, ವಿವರಿಸುತ್ತಾರೆ. ಉತ್ತರ ಹುಡುಕುತ್ತಾರೆ. ಇಂತಹ ಸಮಸ್ಯೆಗಳು ಯೂರೋಪಿನಲ್ಲಿಲ್ಲ. ಆದ್ದರಿಂದ ಅದರ ಬಗ್ಗೆ ಯಾರೂ ಬರೆಯುವುದಿಲ್ಲ. ಉದಾಹರಣೆಗೆ ಹೆಂಗಸರ ಸಮಸ್ಯೆಗಳು. ವಿಧವೆಯರು ಮತ್ತೆ ಮದುವೆ ಆಗಬಾರದು ಇತ್ಯಾದಿ. ಯೂರೋಪಿನಲ್ಲಿ ಅದು ಸಮಸ್ಯೆಯೇ ಅಲ್ಲ. ಎಂ.ಕೆ. ಇಂದಿರಾ ಅವರ 'ಫಣಿಯಮ್ಮ', ನಿರಂಜನರ 'ಬನಶಂಕರಿ', ಯು.ಆರ್. ಅನಂತಮೂರ್ತಿಯವರ 'ಘಟಶ್ರಾದ್ಧ' ಇಂತಹ ಕಥೆಗಳು ಆಧುನಿಕ ಯೂರೋಪಿನಲ್ಲಿ ಸಾಧ್ಯವೇ ಇಲ್ಲ. ಆಮೇಲೆ ಕೆಲವು ಧಾರ್ಮಿಕ ಸಂಘರ್ಷಗಳು. ಆಮೇಲೆ ಜಾತಿಪದ್ಧತಿ. ಅದು ಸಂಸ್ಕೃತಿ ವಿಶಿಷ್ಟ. ಆಮೇಲೆ ಸಾಂಸ್ಕೃತಿಕ ಸಂಘರ್ಷ. ಎಸ್.ಎಲ್. ಭೈರಪ್ಪನವರ 'ತಬ್ಬಲಿಯು ನೀನಾದೆ ಮಗನೆ' ಕಾದಂಬರಿಯಲ್ಲಿ ಒಬ್ಬ ಅಮೆರಿಕನ್ ಹೆಂಗಸು ಭಾರತಕ್ಕೆ ಬರುತ್ತಾರೆ. ಆಕೆಯ ಗಂಡ ಸುಮಾರು ವರ್ಷ ಅಮೆರಿಕಾದಲ್ಲಿದ್ದ.